ಸಿ. ಸಿ. ನಂ.- **439/2021**

ಪಿ.ಡಬ್ಲ್ಯೂ. **1**

ಸಾಕ್ಷಿಯು ದಿನಾಂಕ- **18-10-2023** ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀಸವಾಲು- ಆರೋಪಿ ಪರ ಶ್ರೀ ಯು.ಜಿ ವಕೀಲರಿಂದ -

ನಿ.ಪಿ **6** ರ ಸಮಯದಲ್ಲಿ ನಾನು ಆರೋಪಿಯಿಂದ ಖಾಲಿ ಚೆಕ್ ಗಳನ್ನು ಪಡೆದುಕೊಂಡು ಅದನ್ನು ದುರುಪಯೋಗಡಪಡಿಸಿಕೊಂಡು ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಯಾವುದೇ ಖಾಲಿ ಚೆಕ್ ನ್ನು ನಾನು ತೆಗೆದುಕೊಂಡಿಲ್ಲ ಭರ್ತಿ ಮಾಡಿರುವ ಚೆಕ್ ನ್ನು ಅವರು ನೀಡಿರುತ್ತಾರೆ. ನಿ.ಪಿ **1** ರಲ್ಲಿರುವ ಬರಹಗಳ ಶಾಹಿ ಮತ್ತು ದಿನಾಂಕದ ಶಾಹಿ ಬೇರೆ-ಬೇರೆ ಇದೆ ಎಂದರೆ ಸರಿ. ಅವರೇ ಬರೆದುಕೊಟ್ಟಿರುತ್ತಾರೆ. ನಿ.ಪಿ **1** ನ್ನು ಆರೋಪಿ ನನ್ನ ಮುಂದೆ ಭರ್ತಿ ಮಾಡಿ ಸಹಿ ಮಾಡಿ ನೀಡಿರುತ್ತಾರೆ. ಆರೋಪಿಯು ರೂ. **3,50,000/-** ಗಳನ್ನು ಕೂಡುತ್ತೇನೆಂದು ಹೇಳಿದ್ದರು ಸಹ ನಾನು ರೂ. **5** ಲಕ್ಷಗಳಿಗೆ ಈ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ರೂ. **5** ಲಕ್ಷಗಳನ್ನು ಕೊಡಲು ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಲಯ
ಮತ್ತು ಪ್ರ. ದ. ನ್ಯಾ ದಂ.ಗಳು, ಹೊಸಪೇಟೆ.